ಕರ್ನಾಟಕ ಸರ್ಕಾರ

**ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12**

ದಿನಾಂಕ: .09.2021

ಸಂಖ್ಯೆ:ಪಪೂಶಿಇ/ಭಾಸ್ಕೌಗೈ/ರೋ.ರೇ.ನಿ/01/2021-22

**ಸುತ್ತೋಲೆ**

**ವಿಷಯ:** ವಿಭಾಗಮಟ್ಟದ ರೋವರ್ಸ್ ಸ್ಕೌಟ್ ಲೀಡರ್ಸ್‌ಗಳ/ರೇಂಜರ್ ಲೀಡರ್ಸ್‌ಗಳ ಮೂಲ ತರಬೇತಿ ಶಿಬಿರಗಳಿಗೆ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರು/ಉಪನ್ಯಾಸಕಿಯರುಗಳನ್ನು ನಿಯೋಜಿಸುವ ಕುರಿತು.

**ಉಲ್ಲೇಖ:** ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಇವರ ಪತ್ರಗಳು 1.ಸಂಖ್ಯೆ: ಬಿಎಸ್‌ಜಿ:ಎಸ್‌ಹೆಚ್‌ಕ್ಯೂ:687:2021-22 ದಿ:04.08.2021 ಮತ್ತು 2.ಸಂಖ್ಯೆ: ಬಿಎಸ್‌ಜಿ:ಎಸ್‌ಹೆಚ್‌ಕ್ಯೂ:924:2021-22 ದಿ:01.09.2021

* * * * *

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯ ವತಿಯಿಂದ ವಿಭಾಗಮಟ್ಟದ ರೋವರ್ಸ್ ಸ್ಕೌಟ್ ಲೀಡರ್ಸ್‌ಗಳ/ ರೇಂಜರ್ ಲೀಡರ್ಸ್‌ಗಳ ಮೂಲ ತರಬೇತಿ ಶಿಬಿರವನ್ನು ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರಿಗೆ / ಉಪನ್ಯಾಸಕಿಯರುಗಳಿಗೆ ನೇರವಾಗಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಂಸ್ಥೆಯಿಂದ ಆಯೋಜಿಸಿದ್ದು, ಸದರಿ ತರಬೇತಿಗಳಿಗೆ ಉಪನ್ಯಾಸಕರುಗಳನ್ನು ನಿಯೋಜಿಸಲು ಉಲ್ಲೇಖಿತ ಪತ್ರಗಳಲ್ಲಿ ಕೋರಿರುತ್ತಾರೆ.

ಅದರಂತೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯ ವತಿಯಿಂದ ಆಯೋಜಿಸಿರುವ ವಿಭಾಗಮಟ್ಟದ ರೋವರ್ಸ್ ಸ್ಕೌಟ್ ಲೀಡರ್ಸ್‌ಗಳ/ ರೇಂಜರ್ ಲೀಡರ್ಸ್‌ಗಳ ಮೂಲ ತರಬೇತಿ ಶಿಬಿರಕ್ಕೆ ಪ್ರತಿ ಜಿಲ್ಲೆಗಳಿಂದ ಉಪನ್ಯಾಸಕರು/ಉಪನ್ಯಾಸಕಿಯರುಗಳನ್ನು ದಿನಾಂಕ:15.09.2021ರ ಒಳಗಾಗಿ ನಿಯೋಜಿಸಲು ಆದೇಶಿಸಿದೆ.

**ವಿಭಾಗಮಟ್ಟದ ತರಬೇತಿಯ ವಿವರಗಳು:**

| ವಿಭಾಗ | ದಿನಾಂಕ ಮತ್ತು ಸ್ಥಳ | ಭಾಗವಹಿಸಬೇಕಾದ ಜಿಲ್ಲೆಗಳು |
|---|---|---|
| ಬೆಂಗಳೂರು | 22.09.2021 ರಿಂದ 28.09.2021 ಡಾ॥ ಆನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ | ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಗ್ರಾಮಾಂತರ, ಬಿಬಿಎಂಪಿ, ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ, ಮಧುಗಿರಿ, ತುಮಕೂರು, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ. |
| ಕಲ್ಬುರ್ಗಿ | 22.09.2021 ರಿಂದ 28.09.2021 ಮುರಾರ್ಜಿ ದೇಸಾಯಿ ವಸತಿ ಶಾಲೆ, ಮೋಕ (ಬೈರದೇವನಹಳ್ಳಿ), ಬಳ್ಳಾರಿ ತಾಲ್ಲೂಕು, ಬಳ್ಳಾರಿ ಜಿಲ್ಲೆ | ಕೊಪ್ಪಳ, ಬಳ್ಳಾರಿ, ರಾಯಚೂರು, ಬೀದರ್, ಕಲ್ಬುರ್ಗಿ, ಯಾದಗಿರಿ. |
| ಮೈಸೂರು | 25.10.2021 ರಿಂದ 31.10.2021 ಡಾ॥ ಆನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ | ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ, ಹಾಸನ. |
| ಬೆಳಗಾವಿ | 25.10.2021 ರಿಂದ 31.10.2021 ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿ, ದಾವಣಗೆರೆ ಜಿಲ್ಲೆ. | ಬೆಳಗಾವಿ, ವಿಜಯಪುರ, ಕಾರವಾರ, ಶಿರಸಿ, ಧಾರವಾಡ, ಹಾವೇರಿ, ಗದಗ, ಬಾಗಲಕೋಟೆ. |

ನೊಂದಾವಣೆ ಶುಲ್ಕ, ದಳ ನೊಂದಾವಣೆ ಶುಲ್ಕ, ಶಿಬಿರದ ನೊಂದಣಿ ಶುಲ್ಕ/ದಳ ನೊಂದಣೆ ಶುಲ್ಕ, ಪ್ರಯಾಣ ವೆಚ್ಚ, ಸಮವಸ್ತ್ರ ವೆಚ್ಚಗಳನ್ನು ಆಯಾಯ ಪದವಿ ಪೂರ್ವ ಕಾಲೇಜುಗಳ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರೋವರ್ಸ್/ ರೇಂಜರ್ಸ್ ನಿಧಿಯಿಂದ ಭರಿಸುವುದು. ತರಬೇತಿಯಲ್ಲಿ ಭಾಗವಹಿಸುವ ಉಪನ್ಯಾಸಕರುಗಳ ವಿವರಗಳನ್ನು ದಿನಾಂಕ:15.09.2021ರ ಒಳಗಾಗಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಸಂಸ್ಥೆಗೆ ನೀಡಿ ನೊಂದಾಯಿಸಿಕೊಳ್ಳಲು ಸೂಚಿಸಿದೆ ಹಾಗೂ ನಿಯೋಜಿಸಿರುವ ಬಗ್ಗೆ ಕೇಂದ್ರ ಕಛೇರಿಗೆ ಮಾಹಿತಿ ನೀಡುವುದು. ತರಬೇತಿಗೆ ತರಬೇಕಾದ ವಸ್ತುಗಳು ಇತ್ಯಾದಿ ವಿವರಗಳ ಮಾಹಿತಿಗಳಿಗಾಗಿ ಉಲ್ಲೇಖಿತ ಪತ್ರಗಳನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದೆ.

**ತರಬೇತಿಗೆ ಸಂಬಂಧಪಟ್ಟಂತೆ ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿಗಳ ವಿವರಗಳು.**

ಶ್ರೀ ಎಲ್.ಟಿ.ಲೋಕೇಶ್, ಸಹಾಯಕ ಕಾರ್ಯದರ್ಶಿ ಮತ್ತು ರೋವರ್ಸ್ ಉಸ್ತುವಾರಿ – 9449886981

ಶ್ರೀಮತಿ ಮಲ್ಲೇಶ್ವರಿ ಜುಜಾರೆ, ಎಎಸ್ಒಸಿ ಮತ್ತು ಪ್ರಭಾರಿ ರೇಂಜರ್ ಉಸ್ತುವಾರಿ – 7259115730

ಶ್ರೀ ನಾಗೇಶ್ ಶಿವಪೂರ್, ಎಸ್‌ಟಿ(ಸ್ಕೌಟ್ಸ್) – 9731854272

ಶ್ರೀಮತಿ ಕೆ.ವಿ.ಶಾಮಲ, ಎಸ್.ಟಿ.ಸಿ(ಗೈಡ್ಸ್) – 9980237570

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ

ಕ್ರಮಕ್ಕಾಗಿ,

1. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಉಪನಿರ್ದೇಶಕರುಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ.
2. ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ.

ಮಾಹಿತಿಗಾಗಿ,

1. ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ.